ಎಂದರಾಗುತ್ತಿರಲಿಲ್ಲವೇ? ಅದು ಬಿಡಿ, ಮೋಹಕ ನೃತ್ಯದ ಕನಸನ್ನು ನನಸಾಗಿಸಿಕೊಳ್ಳಿ ಎಂದರೂ ಆಗಿತ್ತು, ಆದರೆ ನಿಮ್ಮ ಜಾಹೀರಾತಿನ ವಾಕ್ಯ ಸರಿ ಎನಿಸುವುದಿಲ್ಲ. ಹೀಗೇಕೆ ಬೋರ್ಡ್. ಮತ್ತೆ ಇಲ್ಲಿ ಯಾರೂ ಕಾಣುತ್ತಿಲ್ಲವಲ್ಲ. ನಿಮ್ಮ ಬೋರ್ಡ್ ತೀರ ಮಾರಾಟದ ಗಿಮಿಕ್ ಆಯಿತು.'

ಶಂಖದ ಕೊರಳ ಸುಂದರಿಗೆ ಇನಿತೂ ಬೇಸರವಿಲ್ಲ. ಮುಗುಳನಗೆಯಲ್ಲೇ ಮುಂದುವರಿಸಿದಳು. 'ಆದರೆ, ನನಗೆ ಇದು ಬರೀ ನೃತ್ಯವಲ್ಲ. ನಾದದೊಂದಿಗೆ ಮೈಯ ಸ್ನಾಯು, ಧಮನಿಗಳ ರಿದಂನಲ್ಲಿ ತೂಗಿದಾಗ ಉಂಟಾಗುವ ಅದ್ವಿತೀಯ ಆನಂದ. ಜೀವನದ ಹೊಸ ಕನಸುಗಳಿಗೆ ಹುಟ್ಟು ನೀಡುವ ಉನ್ಮಾದ. ಇಲ್ಲಿ ಕನಸುಗಳು ಅಷ್ಟು ಸುಲಭಕ್ಕೆ ಹುಟ್ಟುವುದಿಲ್ಲ ಕಷ್ಟಪಟ್ಟು ಮಾರಬೇಕು. ಅದೆಲ್ಲ ಇರಲಿ ಬಿಡಿ.'

ಏನೊಂದೂ ಅರ್ಥವಾಗದಿದ್ದರೂ ಶ್ರುತಿ ಸಣ್ಣಗೆ ಮುಗುಳ್ನಕ್ಕಳು. ನೃತ್ಯದ ಉನ್ಮಾದವೇನು ಅವಳಿಗೆ ಹೊಸದೇ? ಅದೇ ಇಂದು ಅವಳಿಗರಿವಿಲ್ಲದೆಯೇ ಇನ್ನೊಂದು ಬಗೆಯ ನೃತ್ಯಕ್ಕೆ ಎಳೆತಂದಿತ್ತೆ? ಭರತನಾಟ್ಯದ ಮೊದಲ ಕ್ಲಾಸಿನಲ್ಲಿ ಅರೆಮಂಡಿ ನಿಂತು ಹೆಜ್ಜೆ ಹಾಕಿ ಇಡೀ ಕಾಲು ಬಿದ್ದು ಹೋಗುವಂತೆ ಕಿತ್ತು ಎದ್ದಿದ್ದ ನೋವಿಗೆ ಅಮ್ಮ ರಾತ್ರಿಯಿಡೀ ಮೂವ್ ಹಚ್ಚುತ್ತ ತಿಕ್ಕಿದ್ದು ನೆನಪಾಯಿತು. ಅದೇ ಮೊದಲು, ಅದೇ ಕೊನೆ, ಮತ್ತೆಂದೂ ಕುಣಿದಾಗ ಕಾಲು ನೋವು ಬರಲೇ ಇಲ್ಲ. ಕುಣಿತವೆ ಮುಂದೆ ಸಕಲ ನೋವಿಗೂ ಮೂವ್ ಕೆಲಸ ಮಾಡುತ್ತಿತ್ತು.

ನೆನಪಿನಿಂದ ಸರಕ್ಕನೆ ಇತ್ತ ತಿರುಗಿ ಪ್ರಶ್ನೆ ಮುಂದುವರಿಸಿದಳು.

'ಆದರೂ ಮತ್ತೆ ಇಲ್ಲಿ ಬೋರ್ಡ್ ಹೀಗೇಕೆ?'

'ಅದೇ ಹೇಳಿದೆನಲ್ಲ. ಇದು ಸುಮ್ಮನೆ ಪುಕ್ಕಟೆ ನಾಳಿನ ಕನಸು ಕಾಣುವ ಕಣ್ಣುಗಳಿಗಲ್ಲ. ನಾನಿಲ್ಲಿ ತರಗತಿ ನಡೆಸುವುದು ಮನೆಮಾರಿಲ್ಲದ ನಿರಾಶ್ರಿತರಿಗೆ, ರೆಫ್ಯೂಜಿಗಳ ಸಹಾಯಾರ್ಥ. ಯುದ್ಧಪೀಡಿತ ಅನಾಥರಿಗೆ. ಈ ಶಾಲೆಯ ಬಹುತೇಕ ಸಿಬ್ಬಂದಿ ಕೂಡ ಅವರೆ. ಕನಸುಗಳ ಬೆನ್ನತ್ತಿದ್ದ ನಿಮಗೆ, ಅದರ ಕೆಳಗೆ ಬರೆದುಕೊಂಡಿದ್ದ ಈ ವಿವರಗಳು ಕಾಣಿಸಲಿಲ್ಲವೇನೋ. ಕನಸು ಸತ್ತವರನಷ್ಟೇ ಈ ಬೋರ್ಡು ಸದಾ ಸೆಳೆಯುತ್ತೆ ಅನ್ನಿ' ಶಂಖದ ಕೊರಳು ಉಲಿಯಿತು. 'ವಿಷಾದದ ಸಂಗತಿಯೆಂದರೆ ಯಾರೊಬ್ಬರು ನನ್ನ ಸಹಾಯಕರಾಗಲೀ, ಸಿಬ್ಬಂದಿಯಾಗಲೀ ಬಿಟ್ಟು ಹೋದರೂ ನನಗೆ ಸಿಬ್ಬಂದಿಯ ಬರವೆನಿಸುವುದೇ ಇಲ್ಲ. ಯುದ್ಧಪೀಡಿತರಿಗೆ ಬರವೆಲ್ಲಿ ಅಲ್ಲವ ಈ ಲೋಕದಲ್ಲಿ?' ಶ್ರುತಿ ಸರಕ್ಕನೆ ಮುಖ ತಿರುಗಿಸಿಕೊಂಡಳು. ಅರೆಗಾಜಿನ ಬಾಗಿಲು ದೂಡಿ ಹೊರನಡಿಯತೊಡಗಿದಳು.

*****

ಸುಮಾರು ಇಪ್ಪತ್ತೈದು ವರ್ಷಗಳ ಹಿಂದಿನ ಕತೆಯದು. ಗಲ್ಫ್ ಯುದ್ಧದ ಸಂದರ್ಭದಲ್ಲಿ ಹೊರಬಿದ್ದ ಅಸಂಖ್ಯಾತ ಕುವೈತಿಗಳ ಸಾಲಿನಲ್ಲಿ ನಿಂತಿದ್ದಳು ಲೆಬನೀಸ್ ಮೂಲದ ಶಾಲೀನ್. ಕುವೈಟಿನಲ್ಲಿ ವ್ಯಾಪಾರಿಯಾಗಿದ್ದ ಕುಟುಂಬ ಅವಳದ್ದು. ಅಪ್ಪ, ಅಮ್ಮ, ಅಣ್ಣ, ಅಕ್ಕಂದಿರೆಲ್ಲ ವಿಶ್ವಸಂಸ್ಥೆಯ ಯಾವ ಯಾವ ದೇಶಕ್ಕೆ ಹೋಗುವ ರೆಫ್ಯೂಜಿಗಳ ಸಾಲಿನಲ್ಲಿದ್ದರೋ, ಕುವೈತಿನ ಮರಳ ದಿನ್ನೆಗಳಲ್ಲಿ ಹುದುಗಿ ಪುಡಿಯಾಗಿದ್ದರೋ, ತೋಪು ತುಪಾಕಿಗಳ ತೆಕ್ಕೆಯಲ್ಲಿ ಚೂರಾಗಿದ್ದರೋ, ಆ ಕೋಲಾಹಲದಲ್ಲಿ ಜೀವ ಉಳಿಸಿಕೊಳ್ಳುವ ಹಲವರ ಓಟದ ನೂಕು ನುಗ್ಗಿನಲ್ಲಿ ಹದಿಹರೆಯದ ಶಾಲೀನ್ ಅಮೆರಿಕೆಯ ನೆಲದಲ್ಲಿ ಬಂದಿಳಿದಿದ್ದಳು. ಬೆದರುಕಂಗಳ ಬಾಲೆಯನ್ನು ಬಾಸ್ಟೇನ್ನಿನ ರೆಫ್ಯುಜಿಗಳ ಪುನರ್ವಸತಿ ಮತ್ತು ಜೀವನೋಪಾಯದ ವಸತಿಗೃಹದಲ್ಲಿ ತಂದುಬಿಟ್ಟಿದ್ದರು. ಅಮ್ಮ ಹೇಳುತ್ತಿದ್ದಳಲ್ಲ ಎಲ್ಲ ಅವನಿಚ್ಛೆ, ಅವನು ಬಯಸದೆ ಏನೂ ನಡೆಯುವುದಿಲ್ಲ ಎಂದು. ಅರೆಕ್ಷಣದಲ್ಲಿ ಧ್ವಂಸಗೊಂಡ ಅವಳ ಪ್ರೀತಿಯ ಕುಟುಂಬ, ಉರಿದುಬಿದ್ದ